RNU AIR DHARWAD

# DECEMBER 05, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಮೂಲಸೌಕರ್ಯ ಸುಧಾರಣೆಗಾಗಿ, ಶಾಸಕರ ಅಧ್ಯಕ್ಷತೆಯಲ್ಲಿ, ಸಮಿತಿ ರಚನೆ.
- ಬೆಳಗಾವಿ ಜಿಲ್ಲೆ, ಸವದತ್ತಿಯ ಶ್ರೀ ರೇಣುಕಾ ಎಲ್ಲಮ್ಮ ದೇಗುಲದ ಸಮಗ್ರ ಅಭಿವೃದ್ಧಿಗೆ, ಕೇಂದ್ರದಿಂದ ನೂರು ಕೋಟಿ ರೂಪಾಯಿ, ಬಿಡುಗಡೆ.
- ಕೊಪ್ಪಳ ಜಿಲ್ಲೆಯ 16 ಗ್ರಾಮಗಳಲ್ಲಿ, ಮಹಿಳಾ ಕೌಶಲ ಕೇಂದ್ರಗಳು ಶೀಘ್ರ ಕಾರ್ಯಾರಂಭ.
- "ಮಣ್ಣಿನ ಆರೈಕೆ" ಧ್ಯೇಯದೊಂದಿಗೆ, ಇಂದು, ವಿಶ್ವ ಮಣ್ಣು ದಿನಾಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಮೂಲಸೌಕರ್ಯ ಸುಧಾರಣೆ ಮತ್ತು ಮೇಲ್ವಿಚಾರಣೆಗಾಗಿ, ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ, ಸಮಿತಿ ರಚನೆಯಾಗಲಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ವಿಧಾನಸೌಧದಲ್ಲಿ, 'ಗೆಳತಿಯರೊಂದಿಗೆ ಹಾರೋಣ' ಕಾರ್ಯಕ್ರಮದಡಿ, 'ಇಂಟರಾಕ್ಟಿವ್ ವಾಯ್ಸ್ ರೆಸ್ಪಾನ್ಸ್ ಸಿಸ್ಟಂ' ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಕಸ್ತೂರಬಾ ಗಾಂಧಿ ಬಾಲಿಕಾ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಲ್ಲಿ, "ಬಾಲಕಿಯರಿಗಾಗಿ ಅಗತ್ಯ ಕೌಶಲಗಳು" ಮತ್ತು "ಇಂಗ್ಲಿಷ್ ಬ್ರಿಡ್ಜ್ ಕೋರ್ಸ್ ಕೈಪಿಡಿ"ಯನ್ನು ಬಿಡುಗಡೆ ಮಾಡಿದ್ದಾಗಿ, ಸಚಿವರು ಹೇಳಿದರು.

<><><>

'ಮಾದಕ ವಸ್ತುಗಳ ಬಳಕೆ ವಿರುದ್ಧ ಜಾಗೃತಿ' ಅಭಿಯಾನಕ್ಕೆ, ಚಿತ್ರನಟ ಉಪೇಂದ್ರ ಹುಬ್ಬಳ್ಳಿಯ ಬಿ.ವಿ.ಬಿ. ತಾಂತ್ರಿಕ ಮತ್ತು ಅಭಿಯಾಂತ್ರಿಕ ಕಾಲೇಜಿನಲ್ಲಿ ಚಾಲನೆ ನೀಡಿದರು. ತೋಳನಕೆರೆ ವರೆಗೆ ವಾಕಥಾನ್ ಮೂಲಕ ತೆರಳಿದ ಉಪೇಂದ್ರ ಅವರು, ಹುಬ್ಬಳ್ಳಿ–ಧಾರವಾಡ ಅವಳಿ ನಗರದ, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳ ಸಹಭಾಗಿತ್ವದಲ್ಲಿ, ಅಪರಾಧ ತಡೆ,

ಸಂಚಾರ ನಿಯಮ ಮತ್ತು ಮಾದಕ ವಸ್ತು ಬಳಕೆ ವಿರುದ್ಧ, ಯುವ ಸಮುದಾಯಕ್ಕೆ ಜಾಗೃತಿ ಮೂಡಿಸುವ ಅಭಿಯಾನದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ಉಪೇಂದ್ರ ಅವರು,

<><><>

ಚಿತ್ರನಟ ಉಪೇಂದ್ರ ಧ್ವನಿ 30 ಸೆಕೆಂದುಗಳು

<><><>

1961 ರಲ್ಲಿ ಪೋರ್ಚುಗೀಸ್‌ರಿಂದ, ಅಂಜದೀಪ್ ದ್ವೀಪವನ್ನು ವಿಮೋಚನೆಗೊಳಿಸಿದ ವೀರ ಯೋಧರಿಗೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು, ಕಾರವಾರದ ನೌಕಾ ನೆಲೆ ಸ್ಮಾರಕದಲ್ಲಿ, ಶ್ರದ್ಧಾಂಜಲಿ ಸಲ್ಲಿಸಿದರು. ರಿಯರ್ ಅಡ್ಮಿರಲ್ ಕೆ.ಎಂ. ರಾಮಕೃಷ್ಣನ್ ಪಾಲ್ಗೊಂಡಿದ್ದರು. ಕಾರವಾರದ ಸೀ ಬರ್ಡ್ ನೌಕಾ ನೆಲೆಯಲ್ಲಿ, ಭಾರತದ ಸ್ವದೇಶಿ ವಿಮಾನ ವಾಹಕ ನೌಕೆ ಐ.ಎನ್.ಎಸ್. ವಿಕ್ರಾಂತ್‌ಗೆ ಭೇಟಿ ನೀಡಿ, ವೀಕ್ಷಿಸಿದರು. ಕ್ಯಾಪ್ಟನ್ ಬೀರೇಂದ್ರ ಬೈನ್ಸ್ ಜೊತೆಗಿದ್ದರು.

ನೌಕಾ ದಳ ದಿನಾಚರಣೆ ಹಿನ್ನೆಲೆ, 'ಬೀಟಿಂಗ್ ರಿಟ್ರೀಟ್ ಆಟ್ ಹೋಂ' ಕಾರ್ಯಕ್ರಮದಲ್ಲಿ ರಾಜ್ಯಪಾಲರು, ಪಾಲ್ಗೊಂಡರು.

<><><>

ಧಾರವಾಡದ ಕೆ.ಇ. ಬೋರ್ಡ್ಸ್ ಪ್ರೌಢ ಶಾಲೆಯಲ್ಲಿ, ಭಾರತೀಯ ನೌಕಾ ದಳ ದಿನಾಚರಣೆಯನ್ನು, ಎನ್.ಸಿ.ಸಿ. ನೇವಲ್ ವಿಂಗ್ ಕೆಡೆಟ್‌ಗಳು, ಆಕರ್ಷಕ ಪಥ ಸಂಚಲನದ ಮೂಲಕ, ಆಚರಿಸಿದರು.

<><><>

ಕೊಪ್ಪಳ ಜಿಲ್ಲೆಯ 16 ಗ್ರಾಮಗಳಲ್ಲಿ, ಮಹಿಳಾ ಕೌಶಲ ಕೇಂದ್ರಗಳು ಶೀಘ್ರ ಕಾರ್ಯಾರಂಭಿಸಲಿವೆ. ಈಗಾಗಲೇ ಎರಡು ಗ್ರಾಮಗಳಲ್ಲಿ, ಮಹಿಳೆಯರಿಗೆ ಕೌಶಲ ತರಬೇತಿ ನೀಡಿ, ಮಹಿಳಾ ಸಬಲೀಕರಣಕ್ಕೆ ಮುನ್ನುಡಿ ಬರೆಯಲಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ ಖರ್ಗೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ. ಜಿಲ್ಲಾ ಪಂಚಾಯ್ತಿ ಸಿಇಓ.ಗಳ ನೇತೃತ್ವದಲ್ಲಿ, ಪಂಚಾಯತ್ ಆಡಳಿತ ಕೌಶಲ ತರಬೇತಿ ಕೇಂದ್ರಗಳನ್ನು ಆರಂಭಿಸಿ, ಸಂಜೀವಿನಿ ಯೋಜನೆಯಡಿ ಸದಸ್ಯತ್ವ ಪಡೆದ, ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿದೆ, ಎಂದಿದ್ದಾರೆ. ಮಹಿಳಾ ಕೌಶಲ ಕೇಂದ್ರಗಳಲ್ಲಿ, ಟೇಲರಿಂಗ್, ಕಂಪ್ಯೂಟರ್ ಸಾಕ್ಷರತೆ, ಬ್ಯಾಗ್ ತಯಾರಿಕೆ, ಕಸೂತಿ ಸೇರಿದಂತೆ ನಾನಾ ಬಗೆಯ ತರಬೇತಿಯನ್ನು, ಮೊದಲ ಹಂತದಲ್ಲಿ 30 ಮಹಿಳೆಯರಿಗೆ ನೀಡಲಾಗಿದೆ ಎಂದು, ತಿಳಿಸಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಸವದತ್ತಿಯ ಶ್ರೀ ರೇಣುಕಾ ಎಲ್ಲಮ್ಮ ದೇಗುಲದ ಸಮಗ್ರ ಅಭಿವೃದ್ಧಿಗೆ, ಕೇಂದ್ರ ಸರ್ಕಾರ ನೂರು ಕೋಟಿ ರೂಪಾಯಿ ಮಂಜೂರು ಮಾಡಿದ್ದಾಗಿ, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ.ಪಾಟೀಲ ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಸವದತ್ತಿ ಶ್ರೀ ರೇಣುಕಾ ಎಲ್ಲಮ್ಮ ದೇಗುಲಕ್ಕೆ, ಒಂದು ಕೋಟಿಗೂ ಅಧಿಕ ಪ್ರವಾಸಿಗರು ಮತ್ತು ಭಕ್ತರು ಭೇಟಿ ನೀಡುತ್ತಿದ್ದು, ಅಗತ್ಯ ವಸತಿ ವ್ಯವಸ್ಥೆ, ಸಮರ್ಪಕ ಮೂಲ ಸೌಕರ್ಯ ಕಲ್ಪಿಸಿ, ಮೇಲ್ದರ್ಜೆಗೇರಿಸಲು, ನೀಲನಕ್ಷೆ ಸಿದ್ಧ ಪಡಿಸಲಾಗುವುದು ಎಂದರು.

<><><>

ಹಾಸನದ ಕೃಷ್ಣ ನಗರದಲ್ಲಿ, ಇಂದು ಕಾಂಗ್ರೆಸ್‌ನ ಜನ ಕಲ್ಯಾಣ ಸಮಾವೇಶ ನಡೆಯಲಿದೆ ಎಂದರು. ಸ್ವಾಭಿಮಾನಿ ಜನ ಕಲ್ಯಾಣ ಕಾರ್ಯಕ್ರಮಕ್ಕಾಗಿ ಸಿದ್ಧತೆಗಳು ಪೂರ್ಣಗೊಂಡಿದ್ದು, ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ಸಂಸದ ಶ್ರೇಯಸ್ ಪಟೇಲ, ಭೇಟಿ ನೀಡಿ ಪರಿಶೀಲಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಇಂದು, ವಿಶ್ವ ಮಣ್ಣು ದಿನಾಚರಣೆ. "ಮಣ್ಣಿನ ಆರೈಕೆ" ಈ ವರ್ಷದ ಧ್ಯೇಯವಾಗಿದೆ. ಅಂತಾರಾಷ್ಟ್ರೀಯ ಮಣ್ಣು ವಿಜ್ಞಾನ ಒಕ್ಕೂಟ, 2002 ರಲ್ಲಿ ಮಣ್ಣಿನ ಪ್ರಾಮುಖ್ಯತೆ ತಿಳಿಸಲು, ಡಿಸೆಂಬರ್ 5 ರಂದು, ವಿಶ್ವ ಮಣ್ಣು ದಿನವನ್ನು ಆಚರಿಸಲು, ನಿರ್ಧರಿಸಿತು. 2012 ಡಿಸೆಂಬರ್ 20 ರಂದು ನಡೆದ, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ, ಆಹಾರ ಭದ್ರತೆ, ಹವಾಮಾನ ವೈಪರಿತ್ಯ, ಸುಸ್ಥಿರ ಅಭಿವೃದ್ಧಿಗೆ ಮಣ್ಣಿನ ಕೊಡುಗೆಯನ್ನು ಪರಿಗಣಿಸಿ, ವಿಶ್ವ ಮಣ್ಣು ದಿನವಾಗಿ ಆಚರಿಸಲು ಘೋಷಿಸಿತು.

<><><>

ಮಣ್ಣು ಪ್ರತಿ ಜೀವ ಸಂಕುಲಕ್ಕೂ ಅತ್ಯಗತ್ಯ. ವಿಶ್ವದ ಎಲ್ಲೆಡೆ ಶೇಕಡ 33 ರಷ್ಟು ಮಣ್ಣಿನ ಫಲವತ್ತತೆ ಕುಸಿದಿದ್ದು, 2050ಕ್ಕೆ ಶೇಕಡ 50 ರಷ್ಟು ಕುಸಿಯಲಿದೆ ಎಂದು ಅಂದಾಜಿಸಲಾಗಿದೆ.

<><><>

ಕರ್ನಾಟಕದಲ್ಲಿ 5 ಲಕ್ಷ ಹೆಕ್ಟರ್ ಪ್ರದೇಶ, ಜವುಳು ಮತ್ತು ಕ್ಷಾರಯುಕ್ತ, ಸಮಸ್ಯಾತ್ಮಕ ಮಣ್ಣಾಗಿದ್ದು, ಬೆಳೆಗಳನ್ನು ಬೆಳೆಯಲು ನಿರುಪಯುಕ್ತವಾಗಿ, ಪರಿಣಮಿಸಿದೆ.

<><><>

ಶೇಕಡ 95ರಷ್ಟು ಆಹಾರ, ಮಣ್ಣಿನ ಮೂಲದಿಂದ ಹಾಗೂ ಒಂದು ಸೆಂಟಿ ಮೀಟರ್ ಫಲವತ್ತಾದ ಮೇಲ್ಮೈ ಮಣ್ಣು ರೂಪುಗೊಳ್ಳಲು, ಸಾವಿರ ವರ್ಷ ಬೇಕು! ಒಂದು ಚಮಚದಷ್ಟು ಗಾತ್ರದ ಮಣ್ಣಿನಲ್ಲಿ, ಒಂಬತ್ತು ಮಿಲಿಯನ್ ಸೂಕ್ಷ್ಮಾಣು ಜೀವಿಗಳಿವೆ.

<><><>

ಬೆಂಗಳೂರು ನಗರ, ಕುಡಿಯುವ ನೀರಿನ ಕೊರತೆಯಂತಹ ಅತಿ ಗಂಭೀರ ಸಮಸ್ಯೆ ಎದುರಿಸುತ್ತಿದ್ದು, ಕೂಡಲೇ ಕೇಂದ್ರ ಸರ್ಕಾರ, ಮೇಕೆದಾಟು ಯೋಜನೆಗೆ ಅನುಮತಿಸಬೇಕು ಎಂದು, ಜೆ.ಡಿ.ಎಸ್. ವರಿಷ್ಟ, ಎಚ್.ಡಿ.ದೇವೇಗೌಡ ರಾಜ್ಯಸಭೆಯಲ್ಲಿ ಆಗ್ರಹಿಸಿದ್ದಾರೆ. ಹಿಂದೆ ಕೆರೆಗಳ ನಗರವಾಗಿದ್ದ ಬೆಂಗಳೂರು ಒತ್ತುವರಿಯಿಂದಾಗಿ, ನೀರಿನ ಮೂಲಗಳನ್ನು ಕಳೆದುಕೊಂಡಿದೆ. ಅಂತರ್ಜಲ ಮಟ್ಟ ಕುಸಿದಿದೆ ಎಂದು, ಗಮನ ಸೆಳೆದರು.

<><><>

ಬಳ್ಳಾರಿಯ, ರಾಬರ್ಟ್ ಬ್ರೂಸ್‌ಫುಟ್ ಸಂಗನಕಲ್ಲು ಪ್ರಾಗ್ ಐತಿಹಾಸಿಕ ವಸ್ತು ಸಂಗ್ರಹಾಲಯ, ಇಡೀ ದೇಶದಲ್ಲಿಯೇ ಅಪರೂಪದ ಮತ್ತು ಮಹತ್ವದ ಪ್ರಾಕ್ತನ ಸಂಶೋಧನಾ ಕೇಂದ್ರವಾಗಿದೆ. ಇತ್ತೀಚೆಗೆ, ಹಲವು ದೇಶಗಳಿಂದ ಅಪರೂಪದ ಐತಿಹಾಸಿಕ ಮಾದರಿಗಳನ್ನು ಸಂಗ್ರಹಿಸಿ, ಪ್ರದರ್ಶನಕ್ಕೆ ಅಣಿಗೊಳಿಸಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಸಂಗನಕಲ್ಲು ಪ್ರಾಕ್ತನ ವಸ್ತುಸಂಗ್ರಹಾಲಯದ ವಿಶ್ವಸ್ಥ, ಬಳ್ಳಾರಿಯ ಹಿರಿಯ ಪತ್ರಕರ್ತ ಮತ್ತಿಹಳ್ಳಿ ಅಹಿರಾಜ.

<><><>

ಮತ್ತಿಹಳ್ಳಿ ಅಹಿರಾಜ ಧ್ವನಿ 50 ಸೆಕೆಂದುಗಳು

<><><>

ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ, ಪ್ರೊಫೆಸರ್ ಎಂ.ಗೋವಿಂದ ರಾವ್ ಅವರು ಇತರೆ ಸದಸ್ಯರೊಂದಿಗೆ, ಕೌಶಲಾಭಿವೃದ್ಧಿ ಖಾತೆ ಸಚಿವ ಶರಣಪ್ರಕಾಶ ಪಾಟೀಲ ಅವರನ್ನು, ಬೆಂಗಳೂರಿನ ವಿಕಾಸಸೌಧದಲ್ಲಿ ಭೇಟಿ

ಮಾಡಿ, ಸಮಾಲೋಚಿಸಿದರು. ಪ್ರಾದೇಶಿಕ ಅಸಮತೋಲನ ಹಾಗೂ ಕಲ್ಯಾಣ ಕರ್ನಾಟಕ ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು, ಕಾರ್ಯತಂತ್ರಗಳನ್ನು ರೂಪಿಸುವ ಕುರಿತು ಚರ್ಚೆ ನಡೆದಿದೆ ಎಂದು, ಸುದ್ದಿ ಸಂಸ್ಥೆ ವರದಿ ಮಾಡಿದೆ.

<><><>

ಮಂಡ್ಯದ ಎಲ್ಲ ಮನೆಗಳ ಮೇಲೆ, ಕನ್ನಡದ ಬಾವುಟ ಹಾರಿಸುವ ಕಾರ್ಯಕ್ರಮಕ್ಕೆ, ನಾಳೆ, ಜಿಲ್ಲಾ ಉಸ್ತುವಾರಿ ಸಚಿವ, ಎನ್. ಚಲುವರಾಯಸ್ವಾಮಿ ಅವರು, ಚಾಲನೆ ನೀಡಲಿದ್ದಾರೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆ, ಮಂಡ್ಯ ನಗರವನ್ನು ಮದುವಣಗಿತ್ತಿಯಂತೆ ಸಿಂಗರಿಸಲು ಯೋಜಿಸಿದ್ದಾಗಿ, ಶಾಸಕ ಹಾಗೂ ನಗರ ಅಲಂಕಾರ ಸಮಿತಿ ಅಧ್ಯಕ್ಷ ರವಿಕುಮಾರ ತಿಳಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಉತ್ತರಕನ್ನಡ ಜಿಲ್ಲೆಯ ಸೂಕ್ಷ್ಮಾತಿ ಸೂಕ್ಷ್ಮ ಭೂ ಕಂಪನವನ್ನು ದಾಖಲಿಸಲು, ರಾಜ್ಯ ನೈಸರ್ಗಿಕ ವಿಪತ್ತು ನಿಯಂತ್ರಣ ಮತ್ತು ಉಸ್ತುವಾರಿ ಕೇಂದ್ರವನ್ನು, ತಾಂತ್ರಿಕವಾಗಿ ಬಲಪಡಿಸಬೇಕು ಎಂದು, ಪರಿಸರ ತಜ್ಞರು ಪತ್ರ ಮುಖೇನ ಒತ್ತಾಯಿಸಿದ್ದಾರೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಅಕ್ಟೋಬರ್ ಅಂತ್ಯದ ವರೆಗೆ, ಒಟ್ಟು 751 ರೈತರು ಹಾವು ಕಡಿತಕ್ಕೆ ಒಳಗಾಗಿದ್ದಾರೆ. ನವೆಂಬರ್ ಅಂತ್ಯದ ವರೆಗೆ, 9 ಸಾವಿರದ 7 ನೂರಾ 15 ಜನ, ನಾಯಿ ಕಡಿತಕ್ಕೆ ಒಳಗಾಗಿದ್ದು, ಕಳೆದ ಮೂರು ವರ್ಷಗಳಲ್ಲಿ 7 ಜನ ಸಾವನ್ನಪ್ಪಿದ್ದಾರೆ.

<><><>

ರಾಮನಗರ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ, ಅನೈರ್ಮಲ್ಯ ಶೌಚಗೃಹ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲು, ಇಂದಿನಿಂದ 11ನೇ ತಾರೀಖಿನ ವರೆಗೆ, ಪೌರಾಡಳಿತ ನಿರ್ದೇಶನಾಲಯ ಸಮೀಕ್ಷೆ ನಡೆಸಲಿದೆ.

<><><>

ಬಾಂಗ್ಲಾದಲ್ಲಿ ಹಿಂದೂಗಳು ಹಾಗೂ ಶ್ರದ್ಧಾ ಕೇಂದ್ರಗಳ ಮೇಲೆ ನಡೆಯುತ್ತಿರುವ ಅನ್ಯಾಯವನ್ನು ಖಂಡಿಸಿ, ಹಿಂದೂ ಹಿತ ರಕ್ಷಣಾ ಸಮಿತಿ ಮುಖಂಡರು, ಕೋಲಾರ ಹಾಗೂ ಬಳ್ಳಾರಿ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಮೂಲಸೌಕರ್ಯ ಸುಧಾರಣೆಗಾಗಿ, ಶಾಸಕರ ಅಧ್ಯಕ್ಷತೆಯಲ್ಲಿ, ಸಮಿತಿ ರಚನೆ.
- ಬೆಳಗಾವಿ ಜಿಲ್ಲೆ, ಸವದತ್ತಿಯ ಶ್ರೀ ರೇಣುಕಾ ಎಲ್ಲಮ್ಮ ದೇಗುಲದ ಸಮಗ್ರ ಅಭಿವೃದ್ಧಿಗೆ, ಕೇಂದ್ರದಿಂದ ನೂರು ಕೋಟಿ ರೂಪಾಯಿ, ಬಿಡುಗಡೆ.
- ಕೊಪ್ಪಳ ಜಿಲ್ಲೆಯ 16 ಗ್ರಾಮಗಳಲ್ಲಿ, ಮಹಿಳಾ ಕೌಶಲ ಕೇಂದ್ರಗಳು ಶೀಘ್ರ ಕಾರ್ಯಾರಂಭ.
- "ಮಣ್ಣಿನ ಆರೈಕೆ" ಧ್ಯೇಯದೊಂದಿಗೆ, ಇಂದು, ವಿಶ್ವ ಮಣ್ಣು ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**